PW-1

ಇಂದು ದಿ.29-08-2023 ರಂದು ಸಾಕ್ಷಿಯು ಹಾಜರಿದ್ದು, ಪ್ರಮಾಣ ವಚನ ಮಾಡಿಸಿ, ಪಾಟೀ ಸವಾಲಿಗೆ ಒಳಪಡಿಸಲಾಯಿತು.

ಪಾಟೀ ಸವಾಲು :- 1 ನೇ ಪ್ರತಿವಾದಿಯ ಪರ ವಕೀಲರಿಂದಃ -

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಸ್ವಲ್ಪ ಮಟ್ಟಿಗೆ ಇಂಗ್ಲೀಷ್ ನಲ್ಲಿ ಬರವಣಿಗೆ ಆದ ವಿಚಾರವನ್ನು ಓದಿ, ತಿಳಿದುಕೊಳ್ಳುವ ಜ್ಞಾನವಿರುತ್ತದೆ. ನಾನು ಈ ದಾವೆಯಲ್ಲಿ ನನ್ನ ತಂದೆಯಿಂದ ಮುಖ್ತಾರನಾಮೆಯನ್ನು ಪಡೆದುಕೊಂಡಿರುತ್ತೇನೆ. ನಮ್ಮ ತಂದೆ ಈಗ ಆನವೇರಿ ಯಲ್ಲಿ 2 ನೇ ಮದುವೆಯನ್ನು ಮಾಡಿಕೊಂಡು ವಾಸವಾಗಿದ್ದಾರೆ. ನಾನು ನನ್ನ ತಂದೆಗೆ ಮೊದಲನೇ ಹೆಂಡತಿಯ ಮಗ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಈ ದಾವೆಯ ವಸ್ತು ವಿಷಯದ ಸಂಪೂರ್ಣ ಮಾಹಿತಿಯನ್ನು ನಮ್ಮ ತಂದೆಯವರು ವಕೀಲರಿಗೆ ಕೊಟ್ಟಿರುತ್ತಾರೆ. ದಾವಾ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತು. ನಮ್ಮ ತಂದೆಗೆ 60 ವರ್ಷ ವಯಸ್ಸು. ನಮ್ಮ ತಂದೆಯವರು ಮನೆಯಲ್ಲಿ ಓಡಾಡುತ್ತಾ ಇದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ತಂದೆಯವರು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಿದ್ದಾರೆ ಆದರೆ ಯಾವ ಖಾಯಿಲೆಗೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ಆಸ್ಪತ್ರೆಯಲ್ಲಿ ಒಳ ರೋಗಿಯಾಗಿ ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಿಲ್ಲ ಮತ್ತು ಹೊರರೋಗಿಯಾಗಿ ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಿದ್ದಾರೆ ಎಂದರೆ ಸರಿ. 1973 ನೇ ಸಾಲಿನಲ್ಲಿ ನಾನು ಜನಿಸಿರಲಿಲ್ಲ ಎಂದರೆ ಸರಿ. 1973 ನೇ ಸಾಲಿನ ಪೂರ್ವದಲ್ಲಿ ನಮ್ಮ ತಂದೆಯವರ ಕುಟುಂಬದಲ್ಲಿ ಆಸ್ತಿ ವಿಚಾರಕ್ಕೆ ಸಂಬಂಧಪಟ್ಟಂತೆ ಆದಂತಹ ವ್ಯವಹಾರಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು 1973 ನೇ ಸಾಲಿನ ಪೂರ್ವದಲ್ಲಿ ನಮ್ಮ ತಂದೆಯವರ ಕುಟುಂಬದಲ್ಲಿ ಆಸ್ತಿ ವಿಚಾರಕ್ಕೆ ಸಂಬಂಧಪಟ್ಟಂತೆ ಆದಂತಹ ವ್ಯವಹಾರಗಳನ್ನು ಕೇಳಿ ತಿಳಿದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ನಮ್ಮ ತಂದೆಯವರು ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯವನ್ನು ನುಡಿಯಲು ಸಕ್ತರಾಗಿದ್ದಾರೆ ಎಂದರೆ ಸರಿ. ನಮ್ಮ ತಂದೆಯವರಿಗೆ ಆರೋಗ್ಯ ಸರಿ ಇಲ್ಲ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ನಮ್ಮ ತಂದೆಯಿಂದ ಮುಖ್ತಾರನಾಮೆಯನ್ನು ಪಡೆದುಕೊಳ್ಳುವ ಸಮಯದಲ್ಲಿ

ಪಾಲುವಿಭಾಗ ಪತ್ರ , ಪಹಣಿ, ಮುಟೇಷನ್ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ. ನಿಪಿ-2 ರ ಮೂಲ ಪ್ರತಿ ನಮ್ಮ ತಂದೆಯ ತಮ್ಮನಾದ ಸಿದ್ದಪ್ಪನವರ ವಶದಲ್ಲಿರುತ್ತದೆ. ನಿಪಿ-2 ಮೂಲ ಪ್ರತಿಯು ಸಿದ್ದಪ್ಪನವರ ವಶದಲ್ಲಿದೆ ಎಂದು ದಾವಾ ಪತ್ರದಲ್ಲಿ ನಮೂದಾಗಿಲ್ಲ ಎಂದರೆ ಸರಿ. ನಿಪಿ-2 ವಿಭಾಗ ಪತ್ರವು 1972-73 ನೇ ಸಾಲಿನಲ್ಲಿ ನಮ್ಮ ಅಜ್ಜ ಮತ್ತು ಅವರ ಅಣ್ಣ ತಮ್ಮಂದಿರ ನಡುವೆ ಆದಂತಹ ವಿಭಾಗ ಪತ್ರವಾಗಿರುತ್ತದೆ. ನನ್ನ ಅಜ್ಜನ ಹೆಸರು ನಂಜಪ್ಪ. ನನ್ನ ಅಜ್ಜ ನಂಜಪ್ಪನಿಗೆ 3 ಜನ ಗಂಡು ಮಕ್ಕಳು ಅಂದರೆ ಬಸವರಾಜಪ್ಪ, ಪರಮೇಶ್ವರಪ್ಪ ಮತ್ತು ಬೆನಕಪ್ಪ. ನಮ್ಮ ತಂದೆ ಪರಮೇಶ್ವರಪ್ಪರವರ ತಂದೆ ನಂಜಪ್ಪ ಎಂದರೆ ಸರಿ. ದಾವಾ ಪತ್ರದಲ್ಲಿ ತಿಳಿಸಿದಂತೆ ಟಿಜಿ. ಬಸಪ್ಪ, ಚನ್ನಬಸಪ್ಪ, ನಂಜಪ್ಪ, ಸಿದ್ದಪ್ಪ, ಶಾಂತಪ್ಪ ಮತ್ತು ಹನುಮತಂಪ್ಪ ನಮ್ಮ ಅಜ್ಜನ ಅಣ್ಣ ತಮ್ಮಂದಿರು ಎಂದರೆ ಸರಿ. 1973 ನೇ ಸಾಲಿನಲ್ಲಿ ಟಿ.ಜಿ. ಬಸಪ್ಪ, ಚನ್ನಬಸಪ್ಪ, ನಂಜಪ್ಪ, ಸಿದ್ದಪ್ಪ, ಶಾಂತಪ್ಪ ಮತ್ತು ಹನುಮತಂಪ್ಪ ರವರ ನಡುವೆ ನಿಪಿ-2 ವಿಭಾಗ ಪತ್ರ ಆಗಿರುತ್ತದೆ. 1973 ರ ನಿಪಿ-2 ರ ವಿಭಾಗ ಪತ್ರದಂತೆ ನಮ್ಮ ಅಜ್ಜನಿಗೆ ಸಾಕಷ್ಟು ಜಮೀನುಗಳು ಭಾಗಂಶದ ಮೂಲಕ ಬಂದಿರುತ್ತದೆ ಆದರೆ ದಾವಾ ಆಸ್ತಿಯನ್ನು ಹೊರತು ಪಡಿಸಿದರೆ ಬೇರೆ ಆಸ್ತಿಗಳ ನಂಬರ್ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ನಿಪಿ-2 ವಿಭಾಗ ಪತ್ರವನ್ನು ಓದಿ ತಿಳಿದುಕೊಳ್ಳುವ ಯಾವುದೇ ಪ್ರಯತ್ನವನ್ನು ಮಾಡಿಲ್ಲ ಎಂದರೆ ಸರಿ. ನಿಪಿ-2 ವಿಭಾಗ ಪತ್ರದ ಆಧಾರದ ಮೇಲೆ ಖಾತೆ ಕಂದಾಯವನ್ನು ಬದಲಾವಣೆಯನ್ನು ಮಾಡಲು ಅರ್ಜಿಯನ್ನು ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ 135/2008 ದಾವೆಯನ್ನು ನಮ್ಮ ದೊಡ್ಡಪ್ಪ ಈ ದಾವೆಯ 1 ನೇ ಪ್ರತಿವಾದಿ, ಟಿ.ಜಿ ಬಸಪ್ಪ, ಟಿ.ಜಿ ಶಿವಲಿಂಗಪ್ಪ ರವರ ವಿರುದ್ಧ ಸರ್ವೇ ನಂ. 41/2 ಮತ್ತು 41/5 ಕ್ಕೆ ಸಂಬಂಧಪಟ್ಟಂತೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯು ವಜಾಗೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಮತ್ತು ಬಸವರಾಜಪ್ಪ ಪರಸ್ಪರ ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ. ನಿಪಿ-2 ವಿಭಾಗ ಪತ್ರವಾದ ನಂತರ ನಮ್ಮ ಅಜ್ಜನ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ. 1983 ನೇ ಸಾಲಿನಿಂದ 2006 ನೇ ಸಾಲಿನವರೆಗೂ ದಾವಾ ಆಸ್ತಿಗೆ ಸಂಬಧಪಟ್ಟಂತೆ ಖಾತೆ ನಮ್ಮ ತಂದೆಯವರ ಹೆಸರಿನಲ್ಲಿತ್ತು. ತದನಂತರ ಬಸಪ್ಪ ಬಿನ್ ಚನ್ನಬಸಪ್ಪರವರ, ಶಿವಲಿಂಗಪ್ಪ ಬಿನ್ ಚನ್ನಬಸಪ್ಪ ರವರ ಹೆಸರಿಗೆ ಜಂಟಿಯಾಗಿ ಖಾತೆ ಆಗಿದೆ. ಆದರೆ ಅವರ ಹೆಸರಿಗೆ ಹೇಗೆ ಆಯಿತು ಎನ್ನುವ ವಿಚಾರ ನನಗೆ ಗೊತ್ತಿಲ್ಲ. ತಹಶೀಲ್ದಾರರವರ ಆದೇಶದ ಮೇರೆಗೆ ಸದರಿರವರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ. ತಹಶೀಲ್ದಾರರವರ ಆದೇಶದ ನಂತರ

ನಮ್ಮ ದೊಡ್ಡಪ್ಪ ರವರು ಅಸಲು ದಾವಾ ಸಂಖ್ಯೆ 135/2008 ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. 1973 ರ ವಿಭಾಗ ಪತ್ರವು ತುಂಡು ಭೂಮಿ ಖಾಯ್ದೆ ಅಡಿಯ ವ್ಯಾಪ್ತಿಯಲ್ಲಿ ಬರುವುದರಿಂದ ಖಾತೆ ಬದಲಾವಣೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 135/2008 ರಲ್ಲಿ ಆದ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಬಸವರಾಜಪ್ಪರವರು ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಮೇಲ್ಕಂಡ ದಾವೆ ಮತ್ತು ಮೇಲ್ಮನವಿಯ ಬಗ್ಗೆ ನಮ್ಮ ವಕೀಲರಿಗೆ ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಮಾಹಿತಿಯನ್ನು ಕೊಟ್ಟಿರುತ್ತೇವೆ. 1973 ರ ವಿಭಾಗ ಪತ್ರದ ಪ್ರಕಾರ ನಮ್ಮ ಅಜ್ಜನಿಗೆ ಸರ್ವೇ ನಂ. 41 ರಲ್ಲಿ 6 ಎಕರೆ 15 ½ ಗುಂಟೆ ಜಮೀನು ಬಂದಿರುತ್ತದೆ. ಸದರಿ ಜಮೀನು ನಮ್ಮ ಅಜ್ಜನ ಹೆಸರಿಗೆ ಖಾತೆ ಬದಲಾವಣೆ ಆಗಿರುವ ವಿಚಾರ ನನಗೆ ಗೊತ್ತಿಲ್ಲ.

ಪ್ರತಿವಾದಿಯ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹೊನ್ನಾಳಿ.